**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ. 954/2023**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಸರಿತಾ ವಾಜ್ | ಪ್ರಾಸಾ-1 |
| ಗಂಡನ ಹೆಸರು | ಃ ಆಲ್ವಿನ್ ವಾಜ್ | ಚಾಸಾ-1 |
| ವಯಸ್ಸು | ಃ 43 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | ಃ ಸ್ಕೂಲ್ ಕೌನ್ಸಿಲ್, ಐ.ಸಿ.ಎಸ್. ಶಾಲೆ, | ದಿನಾಂಕಃ21.12.2023 |
| ವಾಸಸ್ಥಳ | ಃ ಬೆಂಗಳೂರು. | |

**ಃಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದಃ**

ಈ ದಿನ ನ್ಯಾಯಾಲಯ ಮುಂದೆ ಇರುವ ಆರೋಪಿಯನ್ನು ದಿನಾಂಕಃ27.05.2023 ರಂದು ಅಪಘಾತವಾದ ನಂತರ ಬಸ್ ನಿಂದ ಇಳಿದಾಗ ನೋಡಿರುತ್ತೇನೆ. ಚಾಸಾ-7 ನನ್ನ ತಾಯಿ. ಚಾಸಾ-8 ನನ್ನ ಸ್ನೇಹಿತ. ಚಾಸಾ-9 ರಿಂದ ಚಾಸಾ-12 ರವರು ನನಗೆ ಗೊತ್ತಿಲ್ಲ.

ದಿನಾಂಕಃ27.05.2023 ರಂದು ನಾನು, ಚಾಸಾ-7, ಚಾಸಾ-8 ಮತ್ತು ಆಂಟೋನಿ ಮಥಾಯಿಸ್ ರವರೊಂದಿಗೆ ಬೆಂಗಳೂರಿನಿಂದ ಹೊರನಾಡಿಗೆ ನನ್ನ ಗಂಡನ ಕಾರಿನ ಸಂಖ್ಯೆಃ ಕೆಎ-05-ಎನ್ ಬಿ-3270 ರಲ್ಲಿ ಹೋಗುತ್ತಿರುವಾಗ, ಬೆಳಗ 11.30 ರ ಸುಮಾರಿಗೆ ಕಲ್ಮಕ್ಕಿಯ ಬಳಿ ರಸ್ತೆಯ ತಿರುವಿನಲ್ಲಿ ಆರೋಪಿಯು ಅನ್ನಪೂರ್ಣೇಶ್ವರಿ ಬಸ್ ಸಂಖ್ಯೆ ಕೆಎ-18-ಬಿ-1419 ರನ್ನು ಅತಿ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ರಸ್ತೆಯ ಬಲಬದಿಯಲ್ಲಿ ಬಂದು ಎಡಬದಿಯಲ್ಲಿ ಹೋಗುತ್ತಿದ್ದ ನಮ್ಮ ಕಾರಿಗೆ ಡಿಕ್ಕಿಪಡಿಸಿದ ಪರಿಣಾಮ ನಾನು ಸ್ಥಳದಲ್ಲಿ ಗಾಬರಿಯಾಗಿ ನನ್ನ ತಂದೆಯನ್ನು ನೋಡಿದಾಗ ಅವರು ಏನನ್ನೋ ಹೇಳಲು ಪ್ರಯತ್ನಿಸುತ್ತಿದ್ದರು. ನಂತರ ಅಲ್ಲಿದ್ದ ಜನರು ಒಂದು ಸುಮೋ ವಾಹನದಲ್ಲಿ ನನ್ನ ತಂದೆಯನ್ನು ಕಳಸ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆಸ್ಪತ್ರೆಯಲ್ಲಿನ ವೈದ್ಯರು ನನ್ನ ತಂದೆ ಮೃತಪಟ್ಟಿರುವುದಾಗಿ ತಿಳಿಸಿದರು. ಅಪಘಾತದಿಂದ ನನಗೆ ಎದೆಯ ಭಾಗಕ್ಕೆ, ಚಾಸಾ-7 ಮತ್ತು 8 ರವರಿಗು ಸಹ ಗಾಯಗಳಾಗಿರುತ್ತವೆ.

ಅದೇ ದಿನ ಮಧ್ಯಾಹ್ನ 12.00 ರ ಸುಮಾರಿಗೆ ಕಳಸ ಪೊಲೀಸ್ ಠಾಣೆಗೆ ಹೋಗಿ, ಬಸ್ ಚಾಲಕನ ವಿರುದ್ದ ದೂರು ದಾಖಲಿಸಿರುತ್ತೇನೆ. ನಂತರ ಪೊಲೀಸರು ನನ್ನನ್ನು ಅಪಘಾತ ನಡೆದ ಸ್ಥಳವನ್ನು ತೋರಿಸುವಂತೆ ಕೋರಿದ್ದು, ಅದರಂತೆ ನಾನು ಸಂಜೆ 5.30 ರಿಂದ 6.00 ರ ಸಮಯಕ್ಕೆ ಅಪಘಾತ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದು, ಪೊಲೀಸರು ಸ್ಥಳವನ್ನು ಪರಿಶೀಲಿಸಿ ಸ್ಥಳದ ವಿವರವನ್ನು ನಮೂದು ಮಾಡಿಕೊಂಡು ಸ್ಥಳದಲ್ಲಿ ಇದ್ದ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ಚಾಸಾ-6, ಇಬ್ಬರು ಪೊಲೀಸರು ಮತ್ತು ಇಬ್ಬರು ಸಾಕ್ಷಿದಾರರು ಇದ್ದರು. ಆ ಸ್ಥಳದಲ್ಲಿ ಭಾವಚಿತ್ರವನ್ನು ತೆಗೆಯಲಾಗಿದೆ.

ಸಾಕ್ಷಿಯು ದಿನಾಂಕಃ27.05.2023 ರ ದೂರು, ಪ್ರಥಮ ವರ್ತಮಾನ ವರದಿ, ಮಹಜರ್ ನಲ್ಲಿ ತಮ್ಮ ಸಹಿಗಳನ್ನು ಗುರುತಿ, 6 ಭಾವಚಿತ್ರಗಳಲ್ಲಿ ತಾವು ಇರುವ ಬಗ್ಗೆ ಮತ್ತು ಉಳಿದ 8 ಭಾವಚಿತ್ರಗಳಲ್ಲಿ ಇರುವ ವಾಹನಗಳನ್ನು ಆ ದಿನ ಪೊಲೀಸರು ತಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡ ಬಗ್ಗೆ ಗುರುತಿಸುತ್ತಾರೆ. ದೂರನ್ನು ನಿಪಿ-1, ಪ್ರಥಮ ವರ್ತಮಾನ ವರದಿಯನ್ನು ನಿಪಿ-2, ಮಹಜರನ್ನು ನಿಪಿ-3, ಸಾಕ್ಷಿಯ ಸಹಿಗಳನ್ನು ನಿಪಿ-1(ಎ), ನಿಪಿ-2(ಎ), ನಿಪಿ-3(ಎ), ಭಾವಚಿತ್ರಗಳನ್ನು ಪ್ರಮಾಣ ಪತ್ರ ಮತ್ತು ಸಿ.ಡಿ., ಯೊಂದಿಗೆ ನಿಪಿ-4 ರಿಂದ ನಿಪಿ-19 ಎಂದು ಗುರುತಿಸಲಾಯಿತು. ಸಾಕ್ಷಿಯು ಮತ್ತೊಂದು ಭಾವಚಿತ್ರದಲ್ಲಿ ತಾವು ಇರುವುದನ್ನು ಗುರುತಿಸಿ, ಆ ಭಾವಚಿತ್ರದಲ್ಲಿ ಕಾಣುವ ಮೃತದೇಹವು ತಮ್ಮ ತಂದೆಯದ್ದು ಎಂದು ಗುರುತಿಸುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ-20 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಅಪಘಾತಪಡಿಸಿದ ಬಸ್ಸಿನ ಚಾಲಕ ಎಂದು ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎ.ಎಂ., ವಕೀಲರಿಂದಃ</u>**

ನನಗೆ ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಲು ಬರುತ್ತದೆ, ಆದರೆ ಮಾತನಾಡಲು ಬರುವುದಿಲ್ಲ. ನಿಪಿ-1 ಕನ್ನಡದಲ್ಲಿ ಬರೆದಿದೆ ಅಂದರೆ ಸರಿ. ನಿಪಿ-1 ನ್ನು ನಾನು ಹೇಳಿ ಬರೆಸಿಲ್ಲ ಅಂದರೆ ಸರಿಯಲ್ಲ. ನಾನು ಹೇಳಿದ ಕಾರನ್ನು ಒಂದು ವರ್ಷದ ಹಿಂದೆ ಖರೀದಿ ಮಾಡಿದ್ದೆವು. ನನ್ನ ಪತಿ ಈಗ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ. ನನ್ನ ಪತಿ ಕಾರನ್ನು ಸ್ವಂತ ಉಪಯೋಗಕ್ಕಾಗಿ ಖರೀದಿ ಮಾಡಿದ್ದರು. ನಾನು ಯಾವುದೇ ಕೆಲಸ ಮಾಡುತ್ತಿಲ್ಲ ಅಂದರೆ ಸಾಕ್ಷಿಯು ಅಪಘಾತವಾದ ದಿನಾಂಕದಂದು ಕೆಲಸ ಮಾಡುತ್ತಿರಲಿಲ್ಲ, ಆದರೆ ಇತ್ತೀಚೆಗೆ ಕೆಲಸಕ್ಕೆ ಸೇರಿರುವುದಾಗಿ ನುಡಿಯುತ್ತಾರೆ. ನನ್ನ ಪತಿ ಬೆಂಗಳೂರಿನಲ್ಲಿ ಬಿಲಿಯಲನ್ ಲೋನ್ಸ್ ಎಂಬ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಪಘಾತವಾದ ದಿನ ನನ್ನ ಪತಿ ನಮ್ಮೊಂದಿಗೆ ಬಂದಿರಲಿಲ್ಲ. ನಾನು ನನ್ನ ಗಂಡನ ಅನುಮತಿ ಇಲ್ಲದೆ ಆಗಾಗ ಕಾರನ್ನು ಚಾಲನೆ ಮಾಡುತ್ತೇನೆ ಅಂದರೆ ಸರಿಯಲ್ಲ. ಕಳಸ, ಕೊಟ್ಟಿಗೆಹಾರ ಮಾರ್ಗದಲ್ಲಿ ನಾನು ಈ ಹಿಂದೆ ಕಾರನ್ನು ಚಾಲನೆ ಮಾಡಿರಲಿಲ್ಲ. ಕೊಟ್ಟಿಗೆಹಾರದಿಂದ ಕಳಸಕ್ಕೆ ಒಟ 170 ತಿರುವುಗಳು ಇವೆ ಅಂದರೆ ಸರಿ.

ಕಳಸ, ಕೊಟ್ಟಿಗೆಹಾರ ಮಾರ್ಗದಲ್ಲಿ ಸಾಮಾನ್ಯವಾಗಿ ಎಷ್ಟು ವೇಗದಲ್ಲಿ ವಾಹನವನ್ನು ಚಾಲನೆ ಮಾಡಬಹುದು ಅಂದರೆ ಸಾಕ್ಷಿಯು ತಾವು 30 ರಿಂದ 40 ಕಿ.ಮೀ., ವೇಗವಾಗಿ ಚಾಲನೆ ಮಾಡಿರುವುದಾಗಿ ನುಡಿಯುತ್ತಾರೆ. ಆ ದಿನ ನಾನು ಬೆಂಗಳೂರಿನ ಜಯನಗರದಿಂದ ಬೆಳಗ್ಗೆ 5.30 ರ ಸಮಯಕ್ಕೆ ಹೊರಟೆವು. ನನ್ನ ತಂದೆಯ ಬಲಗೈ ಮತ್ತು ರಟ್ಟೆಯಲ್ಲಿ ಓಂ ಮತ್ತು ಆಂಜನೇಯ ದೇವರ

ಅಚ್ಚೆ ಇತ್ತು ಅಂದರೆ ಸಾಕ್ಷಿಯು ಕ್ರಾಸ್ ರೀತಿಯಲ್ಲಿ ಒಂದು ಅಚ್ಚೆ ಇತ್ತು ಎಂದು ನುಡಿಯುತ್ತಾರೆ. ನನ್ನ ತಂದೆಯವರು ದೇವಸ್ಥಾನಗಳಿಗೆ ಹೋಗುತ್ತಿರಲಿಲ್ಲ. ನಾವು ಹೋಗುತ್ತಿದ್ದ ರೆಸಾರ್ಟ್ ಹೊರನಾಡಿನಿಂದ ಸುಮಾರು 5 ಕಿ.ಮೀ. ದೂರದಲ್ಲಿ ಇತ್ತು. ಸಾಮಾನ್ಯವಾಗಿ ಜನರು ಹೊರನಾಡಿನ ದೇವಸ್ಥಾನ ಮತ್ತು ಕೆಲವು ಸ್ಥಳಗಳಿಗೆ ಭೇಟಿ ನೀಡುತ್ತಾರೆ ಅಂದರೆ ಸರಿ. ಕೆಲವೊಂದು ಸ್ಥಳಗಳ ಭೇಟಿಗೆ ಸಮಯ ನಿಗದಿ ಮಾಡಲಾಗಿರುತ್ತದೆ ಅಂದರೆ ಸರಿ. ನಾನು ದೇವಸ್ಥಾನ ಮತ್ತು ಟೂರಿಸ್ಟ್ ಸ್ಪಾಟ್ ಗಳನ್ನು ನೋಡಲು ಅತಿ ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದೆ ಅಂದರೆ ಸರಿಯಲ್ಲ. ನಾನು ಸರಿಯಾಗಿ ವಾಹನ ಚಾಲನೆ ಮಾಡುವುದಿಲ್ಲ ಅಂದರೆ ಸರಿಯಲ್ಲ.

ಅಪಘಾತವಾದ ಸ್ಥಳವು ಕೊಟ್ಟಿಗೆಹಾರದಿಂದ ಕಳಸಕ್ಕೆ ಹೋಗುವಾಗ ಎಡ ತಿರುವು ಇದ್ದು, ಕಳಸದಿಂದ ಕೊಟ್ಟಿಗೆಹಾರಕ್ಕೆ ಬರುವಾಗ ಬಲ ತಿರುವು ಇದೆ ಅಂದರೆ ಸರಿ. ನಾನು ಹೇಳಿದ ಬಸ್ಸು ಲಾಂಗ್ ಚಾಸಿ ಬಸ್ಸು ಅಂದರೆ ಸರಿ. ಲಾಂಗ್ ಚಾಸಿ ಬಸ್ಸುಗಳು ತಿರುವು ಪಡೆಯುವಾಗ ನಿಧಾನವಾಗಿ ಚಲಿಸುತ್ತವೆ ಅಂದರೆ ಸಾಕ್ಷಿಯು ಚಾಲಕರ ಮೇಲೆ ನಿರ್ಧಾರವಾಗುತ್ತದೆ ಎಂದು ನುಡಿಯುತ್ತಾರೆ. ಲಾಂಗ್ ಚಾಸಿ ಇರುವ ಬಸ 30 ಕಿ.ಮೀ. ಒಳಗಿನ ವೇಗವಾಗಿ ಇದ್ದರೆ ಮಾತ್ರ ತಿರುವು ಪಡೆದುಕೊಳ್ಳಲಾಗುತ್ತದೆ ಅಂದರೆ ಸಾಕ್ಷಿಯು ತಿರುವಿನಲ್ಲು ಸಹ ವೇಗವಾಗಿ ಬರಬಹುದು ಎಂದು ನುಡಿಯುತ್ತಾರೆ. ಕಳಸದಿಂದ ಕೊಟ್ಟಿಗೆಹಾರ ಮಾರ್ಗದಲ್ಲಿ ಸೂಚನಾ ಫಲಕಗಳು ಇಲ್ಲ ಅಂದರೆ ಸಾಕ್ಷಿಯು ಸ್ವಲ್ಪ ಸ್ಥಳಗಳಲ್ಲಿ ಇರುವುದಾಗಿ ನುಡಿಯುತ್ತಾರೆ. ನಾನು ಹೇಳಿದ ಬಸ್ಸು ಹೊರನಾಡಿನಿಂದ ಕೊಟ್ಟಿಗೆಹಾರಕ್ಕೆ ದಿನಕ್ಕೆ 3 ಟ್ರಿಪ್ ಮಾಡುತ್ತದೆ ಅಂದರೆ ಸರಿ. ಆ ಕಾರಣ ಬಸ್ಸಿನ ಚಾಲಕನಿಗೆ ಎಲ್ಲಾ ತಿರುವುಗಳ ಬಗ್ಗೆ ಗಮನ ಇರುತ್ತದೆ ಅಂದರೆ ಸಾಕ್ಷಿಯು ಅತಿಯಾದ ನಂಬಿಕೆಯಿಂದ ವೇಗವಾಗಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಹೇಳಿದ ಬಸ್ಸು ಶೆಟಲ್ ಬಸ್ಸು ಆಗಿದ್ದು, ಅದು ಪ್ರತಿ ಅರ್ಧ ಕಿ.ಮೀ. ಗು ನಿಲ್ಲುತ್ತದೆ ಅಂದರೆ ಸಾಕ್ಷಿಯು ತಾವು ಆ ಬಸ್ಸಿನಲ್ಲಿ ಓಡಾಡಿಲ್ಲದ ಕಾರಣ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಳಸದ ಕೈಮರದಲ್ಲಿ ಒಂದು ಬಸ್ಸು ನಿಲ್ದಾಣ ಇದೆ ಅಂದರೆ ಸರಿ. ಕೈಮರ ಬಸ್ ಸ್ಟಾಪ್ ನಲ್ಲಿ ಸಹ ಜನರು ಬಸ್ಸಿಗೆ ಹತ್ತಿ ಇಳಿಯುತ್ತಾರೆ ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಕಲ್ಲುಮಕ್ಕಿಯಲ್ಲಿ ಸಹ ಬಸ್ ಸ್ಟಾಪ್ ಇದೆ ಅಂದರೆ ಸಾಕ್ಷಿಯು ಅಪಘಾತವಾದ ಸ್ಥಳದಲ್ಲಿ ಬಸ್ ಸ್ಟಾಪ್ ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಕಲ್ಮಕ್ಕಿ ಬಸ್ ಸ್ಟಾಪಿನಲ್ಲಿ ಜನರನ್ನು ಹತ್ತಿಸಿಕೊಂಡು ನಿಧಾನವಾಗಿ ವಾಹನ ಚಾಲನೆ ಮಾಡುತ್ತಿದ್ದರು ಅಂದರೆ ಸರಿಯಲ್ಲ. ನಾನು ಮೊದಲ ಬಾರಿಗೆ ಆ ಸ್ಥಳಕ್ಕೆ ಹೋಗಿದ್ದ ಕಾರಣ ಬಸ್ ಸ್ಟಾಪನ್ನು ಗಮನಿಸಿರುವುದಿಲ್ಲ ಅಂದರೆ ಸರಿಯಲ್ಲ. ಬಸ್ಸಿಗೆ ಜನಗಳನ್ನು ಹತ್ತಿಸಿಕೊಂಡ ನಂತರ ಬಸ್ಸು ಲೋ ಆರ್.ಪಿ.ಎಂ., ಹೊಂದಿರುವ ಕಾರಣ ವೇಗವಾಗಿ ಚಾಲನೆ ಮಾಡಲು ಆಗುವುದಿಲ್ಲ

ಅಂದರೆ ಸಾಕ್ಷಿಯು ಆರೋಪಿಯು ಬಸ್ಸನ್ನು ವೇಗವಾಗಿ ಚಾಲನೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿಯು ಕೈಮರದಿಂದ ಕಲ್ಮಕ್ಕಿಗೆ ಬಸ್ಸನ್ನು ನಿಧಾನವಾಗಿ ಚಾಲನೆ ಮಾಡಿಕೊಂಡು ಬಂದಿದ್ದು, ಯಾವುದೇ ರೀತಿಯ ಅತಿ ವೇಗದ ಚಾಲನೆ ಮಾಡಿಲ್ಲ ಅಂದರೆ ಸರಿಯಲ್ಲ. ಅಪಘಾತ ಆದ ಸ್ಥಳದಲ್ಲಿ ಸಮಾರು ಮನೆಗಳು ಇದ್ದು ಜನರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಕಾಫಿ ಪ್ಲಾಂಟೇಷನ್ ಇದ್ದು, ಅಲ್ಲಿ ಕೂಲಿಯವರು ಕೆಲಸ ಮಾಡುತ್ತಿರುತ್ತಾರೆ ಅಂದರೆ ಗೊತ್ತಿಲ್ಲ. ಸದರಿ ರಸ್ತೆಯಲ್ಲಿ ಜನರು ಕೂಲಿ ಕೆಲಸಕ್ಕೆ ಬೇಕಾಗುವ ವಸ್ತುಗಳನ್ನು ಮತ್ತು ಜಾನುವಾರನ್ನು ತೆಗೆದುಕೊಂಡು ನಡೆದುಕೊಂಡು ಹೋಗುವ ಕಾರಣ ಹಾಗೂ ಶಾಲಾ ಮಕ್ಕಳುಗಳು ಸಹ ನಡೆದುಕೊಂಡು ಹೋಗುವ ಕಾರಣ ಬಸ್ಸನ್ನು ಅತಿ ವೇಗವಾಗಿ ಚಾಲನೆ ಮಾಡಲು ಆಗುವುದಿಲ್ಲ ಅಂದರೆ ಸಾಕ್ಷಿಯು ಆರೋಪಿಯ ಅತಿ ವೇಗವಾಗಿ ಚಾಲನೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕಳಸದಿಂದ ಮರಸಣಿಗೆಯವರೆಗೆ ರಸ್ತೆಯ ಬದಿಗಳಲ್ಲಿ ಕೃಷಿ ಜಮೀನುಗಳು ಇವೆ ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ನಾನು ಹೇಳಿದಂತೆ ಆರೋಪಿಯು ಅತಿ ವೇಗದ ಚಾಲನೆ ಮಾಡಿದ್ದರೆ ಆ ರಸ್ತೆಯಲ್ಲಿ ದಿನಕ್ಕೆ 10 ರಿಂದ 20 ಅಪಘಾತಗಳು ಆಗುತ್ತಿದ್ದವು ಅಂದರೆ ಸಾಕ್ಷಿಯು ಅಪಘಾತಗಳ ಬಗ್ಗೆ ಊಹಿಸಲು ಆಗುವುದಿಲ್ಲ, ಆರೋಪಿಯ ಅಪಘಾತಪಡಿಸಿದ್ದನ್ನು ಹಲವಾರು ಜನರು ಮತ್ತು ಬಸ್ಸಿನಲ್ಲಿ ಇದ್ದವರು ನೋಡಿದ್ದಾರೆ ಎಂದು ನುಡಿಯುತ್ತಾರೆ. ಅಲ್ಲಿದ್ದ ಜನರು ನನ್ನನ್ನು ದೂಷಿಸುತ್ತಿದ್ದರು ಅಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ಆರೋಪಿ ತಪ್ಪನ್ನು ಮಾಡಿದ್ದರೆ ಆತನನ್ನು ಕೆಲಸದಿಂದ ತೆಗೆಯುತ್ತಿದ್ದರು ಆದರೆ ಆರೋಪಿಯು ಈಗಲು ಸಹ ಸದರಿ ಸಂಸ್ಥೆಯ ಬಸ್ಸನ್ನು ಓಡಿಸುತ್ತಿದ್ದಾರೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತವಾದ ಸಮಯದಲ್ಲಿ ನಮ್ಮ ಕಾರು ಹಿಂಬದಿಗೆ ಹೋಗಿತ್ತಾ ಎಂದು ನನಗೆ ಗೊತ್ತಿಲ್ಲ. ನಾನು ರಸ್ತೆಯ ಮಧ್ಯ ಭಾಗದಲ್ಲಿ ಕಾರನ್ನು ಚಲಾವಣೆ ಮಾಡುತ್ತಿದ್ದ ಕಾರಣ ಅಪಘಾತ ಉಂಟಾದ ಕಾರಣ ನಮ್ಮ ಕಾರಿನ ಬಲಭಾಗ ಜಕಂಗೊಂಡಿದೆ ಅಂದರೆ ಸರಿಯಲ್ಲ. ನಾನು ಹೇಳಿದಂತೆ ಬಸ್ಸು ಅತಿ ವೇಗವಾಗಿ ಬಂದು ಡಿಕ್ಕಿಪಡಿಸಿದರೆ ಕಾರು ಸಂಪೂರ್ಣ ಜಕಂಗೊಳ್ಳುತ್ತಿತ್ತು ಅಂದರೆ ಸಾಕ್ಷಿಯು ಬಸ್ಸಿನ ವೇಗದ ಮೇಲೆ ಅಬಲಂಭಿತವಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಬಸ್ಸು ಅತಿ ವೇಗವಾಗಿ ಬಂದು ಡಿಕ್ಕಿಪಡಿಸಿದರೆ ಕಾರಿನಲ್ಲಿ ಇದ್ದವರೆಲ್ಲರಿಗು ಗಾಯಗಳಾಗುತ್ತಿತ್ತು ಅಂದರೆ ಸಾಕ್ಷಿಯು ಕಾರಿನಲ್ಲಿ ಇದ್ದವರೆಲ್ಲರಿಗು ಗಾಯಗಳಾಗಿವೆ ಎಂದು ನುಡಿಯುತ್ತಾರೆ.

ನಿಪಿ-1 ರಲ್ಲಿ ನನ್ನ ತಂದೆ ಮರಣಹೊಂದಿರುವ ವಿಚಾರವನ್ನು ಹೊರತುಪಡಿಸಿ ಬೇರೆ ಯಾರಿಗು ಗಾಯಗಳಾಗಿಲ್ಲ ಎಂದು ನಮೂದು ಮಾಡಲಾಗಿದೆ ಅಂದರೆ ಸಾಕ್ಷಿಯು ದೂರು ಕೊಟ್ಟ ಕಾಲಕ್ಕೆ

ಗಾಯಗಳ ಬಗ್ಗೆ ತಿಳಿದಿರಲಿಲ್ಲ, ಆದರೆ ಬೆಂಗಳೂರಿಗೆ ಹೋದ ನಂತರ ತಿಳಿಯಿತು ಎಂದು ನುಡಿಯುತ್ತಾರೆ. ಅಪಘಾತವಾದ ನಂತರ ನಾವುಗಳು ನನ್ನ ತಂದೆಯನ್ನು ಕಾರಿನಿಂದ ಎಳೆದು ಹೊರಗೆ ಇಳಿಸುವಾಗ ಅವರ ತಲೆಗೆ ಪೆಟ್ಟು ಮಾಡಿ ಅವರನ್ನು ರಸ್ತೆಗೆ ಹಾಕಿದ ಕಾರಣ ಅವರು ಮೃತಪಟ್ಟಿರುತ್ತಾರೆ ಅಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ನಾನು ಸುಳ್ಳು ದೂರು ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ. ಅಪಘಾತವಾದ ನಂತರ ನನಗೆ ನಿದ್ರೆ ಇಲ್ಲದ ಕಾರಣ ಹಾಗೂ ಸುಸ್ತು ಆಗಿದೆ ಎಂದು ಅಲ್ಲಿದ್ದ ಸಾರ್ವಜನಿಕರಿಗೆ ನಾನು ಹೇಳಿದ್ದೆ ಅಂದರೆ ಸರಿಯಲ್ಲ. ಅಪಘಾತ ಆದ ಸಂದರ್ಭದಲ್ಲಿ ನಾನು ಮತ್ತು ನನ್ನ ಮಗ ಮೊಬೈಲ್ ನಲ್ಲಿ ಗೂಗಲ್ ಮ್ಯಾಪ್ ನೋಡುತ್ತಿದ್ದ ಕಾರಣ ಅಪಘಾತ ಆಗಿದೆ ಅಂದರೆ ಸರಿಯಲ್ಲ. ನಿಪಿ-5 ರಲ್ಲಿ ನಾನು ತೋರಿಸುತ್ತಿರುವ ಸ್ಥಳದ ಪಕ್ಕದಲ್ಲಿ ಇರುವ ಖಾಲಿ ರಸ್ತೆಯ ಮೇಲೆ ಮತ್ತೊಂದು ಕಾರು ಹೋಗುವಷ್ಟು ಜಾಗ ಇದೆ ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ-4 ರಲ್ಲಿ ಕಾಣುವ ಹಾಗೂ ನಾನು ತೋರಿಸುತ್ತಿರುವ ರಸ್ತೆಯು ಕೊಟ್ಟಿಗೆಹಾರದಿಂದ ಕಳಸಕ್ಕೆ ಹೋಗುವ ರಸ್ತೆಯ ಬಲಭಾಗಕ್ಕೆ ಇದೆ ಅಂದರೆ ಸಾಕ್ಷಿಯು ತಾವು ಆ ದಿನ ಅಪಘಾತವಾದ ಸ್ಥಳ ಮತ್ತು ಬಸ್ಸು ಇದ್ದ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದು, ಯಾವ ಕಾಲಕ್ಕೆ ಯಾವ ಫೋಟೋವನ್ನು ತೆಗೆಯಲಾಗಿದೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-4 ರಿಂದ ನಿಪಿ-7 ರಲ್ಲಿ ಬಸ್ಸು ಕಾಣಿಸುತ್ತಿಲ್ಲ ಅಂದರೆ ಸಾಕ್ಷಿ ರಸ್ತೆಯ ಮುಂಬದಿಯಲ್ಲಿ ಬಸ್ಸನ್ನು ನಿಲ್ಲಿಸಲಾಗಿತ್ತು ಎಂದು ನುಡಿಯುತ್ತಾರೆ.

ನನ್ನ ವಾಹನವನ್ನು ಬೇರೊಂದು ಕಡೆ ನಿಲ್ಲಿಸಿ ನಾನು ಬೇರೆ ಸ್ಥಳವನ್ನು ತೋರಿಸುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ತಂದೆಯವರಿಗೆ ದೂಮಪಾನ ಮತ್ತು ಮಧ್ಯಪಾನ ಜೊತೆಗೆ ಹೈ ಬಿ.ಪಿ., ಮತ್ತು ಕೊಲೆಸ್ಟ್ರಾಯಲ್ ಖಾಯಿಲೆಗಳು ಇತ್ತು ಅಂದರೆ ಸರಿಯಲ್ಲ. ನಾನು ಗುರುತಿಸಿದ ಎಲ್ಲಾ ದಾಖಲೆಗಳಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಿಪಿ-1 ರಿಂದ 3 ರಲ್ಲಿ ಬರೆದಿರುವ ವಿಚಾರಗಳು ಸುಳ್ಳು ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಷಯಗಳು ಸುಳ್ಳು ಅಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದ್ದು, ನನ್ನ ತಂದೆ ಮರಣದ ವಿಚಾರವಾಗಿ ವಿಮಾ ಹಣ ಪಡೆಯಲು ಆರೋಪಿಯ ವಿರುದ್ದ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-xxx

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.